# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಬಿಜಿಎಂ/789-2022
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 09/09/2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

ವಿಷಯ: **ಡಾ: ಗುರುನಾಥ ಬಲವಂತ ಕಗಲಗೊಂಬ, ಮುಖ್ಯ ವೈದ್ಯಾಧಿಕಾರಿ, ಸಮುದಾಯ ಆರೋಗ್ಯ ಕೇಂದ್ರ, ಮಹಾಲಿಂಗಪೂರ, ತಾ: ಮುಧೋಳ, ಬಾಗಲಕೋಟೆ ಜಿಲ್ಲೆ** – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

-----

1. ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಬಾಗಲಕೋಟೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಡಾ: ಗುರುನಾಥ ಬಲವಂತ ಕಗಲಗೊಂಬ, ಮುಖ್ಯ ವೈದ್ಯಾಧಿಕಾರಿ, ಸಮುದಾಯ ಆರೋಗ್ಯ ಕೇಂದ್ರ, ಮಹಾಲಿಂಗಪೂರ, ತಾ: ಮುಧೋಳ, ಬಾಗಲಕೋಟೆ ಜಿಲ್ಲೆ** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ವೆಂಕಟೇಶ ಸುಭಾಸ ಶಿರಬೂರ, ಸಾ: ನಾಗರಾಳ, ತಾ: ಮುಧೋಳ, ಬಾಗಲಕೋಟೆ ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ನಿಮ್ಮನ್ನು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. **ಪ್ರಕರಣದ ಸಂಕ್ಷಿಪ್ತ ಮಾಹಿತಿ :** ದೂರುದಾರರು ತಮ್ಮ ದೂರಿನಲ್ಲಿ, ತಾನು ಮುಧೋಳ ತಾಲೂಕಿನ ನಾಗರಾಳ ಗ್ರಾಮದ ನಿವಾಸಿಯಾಗಿದ್ದು, ಒಕ್ಕಲುತನ ಮಾಡಿ ಉಪಜೀವನ ಸಾಗಿಸುತ್ತೇನೆ. ತಮ್ಮ ತಂದೆಗೆ 2 ಗಂಡು ಹಾಗೂ 2 ಹೆಣ್ಣು ಮಕ್ಕಳು ಇದ್ದು, ತನ್ನ ತಮ್ಮ ಜಗನ್ನಾಥ ಇವರು ದಿ: 3/6/2020 ರಂದು ಮೃತನಾಗಿದ್ದು, ಅಕ್ಕ ಭಾಗ್ಯಶ್ರೀ ಇವರಿಗೆ ಹಾವೇರಿ ಜಿಲ್ಲೆಯ ಹಾಲಗಿ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದು, ಮತ್ತೊಬ್ಬ ಅಕ್ಕ ರಾಜಶ್ರೀ ಇವರಿಗೆ ಮಹಾರಾಷ್ಟ್ರ ರಾಜ್ಯದ ವಜ್ರೆ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದು ಇರುತ್ತದೆ. ತನ್ನ ಅಕ್ಕ ಭಾಗ್ಯಶ್ರೀ ಗಂಡ ಶಿವಾನಂದ ಹನಮಂತಗೌಡ್ರ ಇವರನ್ನು 2ನೇಯ ಹೆರಿಗೆ ಸಲುವಾಗಿ ಕಳೆದ 3-4 ತಿಂಗಳ ಹಿಂದೆ ನಮ್ಮೂರಿಗೆ ಕರೆದುಕೊಂಡು ಬಂದಿದ್ದು, ಭಾಗ್ಯಶ್ರೀ ಇವರಿಗೆ ಮುಧೋಳದ ಸರಕಾರಿ ಆಸ್ಪತ್ರೆಯಲ್ಲಿ 2 ಬಾರಿ ತೋರಿಸಿದ್ದು, ಇದಾದ ನಂತರದಲ್ಲಿ ತಾನು ತೋರಿಸಿದ

ಮುಧೋಳ ಸರಕಾರಿ ಆಸ್ಪತ್ರೆಯ ವೈದ್ಯರು ನಿವೃತಿ ಆಗಿದ್ದರಿಂದ ಜಮಖಂಡಿಯಲ್ಲಿ ಪಿಎಸ್ಐ ಆಗಿರುವ ತನ್ನ ಅಳಿಯ ಮಹಾಲಿಂಗಪೂರದಲ್ಲಿ ಅವರಿಗೆ ಪರಿಚಯದ ಡಾಕ್ಟರ್ ಇದ್ದು, ಅವರಿಗೆ ಹೇಳುತ್ತೇನೆ ಮಹಾಲಿಂಗಪೂರ ಸರಕಾರಿ ಆಸ್ಪತ್ರೆಗೆ ಭಾಗ್ಯಶ್ರೀ ಇವರನ್ನು ಕರೆದುಕೊಂಡು ಹೋಗುವಂತೆ ತಿಳಿಸಿದರು. ಆದ್ದರಿಂದ ಸೋಮವಾರ ದಿ: 29/06/2020 ರಂದು ಮಧ್ಯಾಹ್ನ ದೂರುದಾರರು ಮತ್ತು ಅವರ ಅಕ್ಕ ರಾಜಶ್ರೀ ಕೂಡಿ, ಅವರ ಅಕ್ಕ ಭಾಗ್ಯಶ್ರೀ ಇವರನ್ನು ಕರೆದುಕೊಂಡು ಮಹಾಲಿಂಗಪೂರ ಸರಕಾರಿ ಆಸ್ಪತ್ರೆಗೆ ಹೋಗಿ, ಎದುರುದಾರರನ್ನು ಭೇಟಿಯಾಗಿರುತ್ತಾರೆ. ಸದರಿಯವರು ಭಾಗ್ಯಶ್ರೀ ರವರನ್ನು ಪರೀಕ್ಷೆ ಮಾಡಿ, ಸಿಜರಿನ್ ಮೂಲಕ ಹೆರಿಗೆ ಮಾಡುವುದಾಗಿ ತಿಳಿಸಿ, ಆಸ್ಪತ್ರೆಯಲ್ಲಿ ದಾಖಲು ಮಾಡಿಕೊಂಡರು. ಮರುದಿನ ಮಂಗಳವಾರ ಅಂದರೆ ದಿ: 30/06/2020 ರಂದು ಮದ್ಯಾಹ್ನ 12 ಗಂಟೆಯ ಸುಮಾರಿಗೆ ಎದುರುದಾರರು, ದೂರುದಾರರ ಅಕ್ಕ ಭಾಗ್ಯಶ್ರೀ ಇವರಿಗೆ ಶಸ್ತ್ರ ಚಿಕಿತ್ಸೆ ಮೂಲಕ ಹೆರಿಗೆ ಮಾಡಿದ್ದು, ಗಂಡು ಮಗು ಹುಟ್ಟಿರುತ್ತದೆ. ಸದರಿಯವರು 9 ದಿನಗಳ ಕಾಲ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಇರಬೇಕೆಂದು ತಿಳಿಸಿರುತ್ತಾರೆ. ಇದಾದ ನಂತರದಲ್ಲಿ, ಎದುರುದಾರರು ಹಲವಾರು ಬಾರಿ ದೂರುದಾರರ ಅಕ್ಕ ಭಾಗ್ಯಶ್ರೀ ಇವರಿಗೆ ಪರೀಕ್ಷಿಸಲು ಬಂದಾಗ, ನಿಮ್ಮ ಮನೆಯವರಿಗೆ ಬಂದು ಭೇಟಿಯಾಗಲು ತಿಳಿಸಿದ್ದರಿಂದ, ದಿ: 03/7/2020 ರಂದು ಸಾಯಂಕಾಲ ಮಹಾಲಿಂಗಪೂರ ಸರಕಾರಿ ಆಸ್ಪತ್ರೆಗೆ ಹೋಗಿ, ದೂರುದಾರರು ಮತ್ತು ಅವರ ಗೆಳೆಯ ಆನಂದ ಮಲ್ಲಪ್ಪ ಕಳ್ಯಾಗೋಳ (ನೀಲಾರಿ) ಇವರ ಜೊತೆ ಎದುರುದಾರರನ್ನು ಭೇಟಿಯಾದಾಗ, ಅವರು ದೊಡ್ಡ ಆಪರೇಶನ್ ಮಾಡಿರುವುದಾಗಿ ದೂರುದಾರರಿಗೆ ತಿಳಿಸಿ ರೂ 10,000/- ಲಂಚದ ಹಣವನ್ನು ಬೇಡಿಕೆ ಇಟ್ಟಿರುತ್ತಾರೆ. ಆಗ ದೂರುದಾರರು ಬಹಳ ಆಗುತ್ತೆ, ಕಡಿಮೆ ಮಾಡಿ, ಅಂತ ಕೇಳಿಕೊಂಡಾಗ, ಎದುರುದಾರರು 10,000/- ರೂ ಕೊಡಲೇಬೇಕು ಅಂತ ಹೇಳಿ, ಹಣವನ್ನು ತೆಗೆದುಕೊಂಡು ನಾಳೆ ಬೆಳಿಗ್ಗೆ ಬನ್ನಿ ಡಿಸ್ಚಾರ್ಜ್ ಮಾಡುವುದಾಗಿ ತಿಳಿಸಿದರು. ಎದುರುದಾರರ ಸದರಿ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದಿದ್ದರಿಂದ, ದೂರನ್ನು ಎದುರುದಾರರ ವಿರುದ್ಧ ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆ, ಬಾಗಲಕೋಟೆ, ಇವರಲ್ಲಿ ದಿ: 4/7/2020 ರಲ್ಲಿ ದೂರನ್ನು ನೀಡಿರುತ್ತಾರೆ. ಸದರಿ ಮೊ.ಸಂಖ್ಯೆ: 07/2020 ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 (ತಿದ್ದುಪಡಿ ಕಾಯ್ದೆ 2018) ಕಲಂ 7(ಎ)ರ ಅಡಿಯಲ್ಲಿ ಪ್ರಕರಣ ದಾಖಲು ಮಾಡಿಕೊಂಡಿರುತ್ತಾರೆ.

3. ದಿನಾಂಕ: 04/07/2020 ರಂದು, ತನಿಖಾಧಿಕಾರಿಯವರು ಪಂಚರಾದ ಶ್ರೀ ರಮೇಶ ಬಾಳಪ್ಪ ಹೆಳವರ, ಪಂಚ-1, ಶ್ರೀ ಶಿವಾನಂದ ಬಸಪ್ಪ ಭರಮಶೆಟ್ಟಿ, ಪಂಚ-2, ಇವರನ್ನು ಬರಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 10,000/- (ಹಣದ ಡಿನಾಮಿನೇಷನ್ 500/- x 20) ಗಳನ್ನು ಹಾಗೂ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆ ದಾಖಲಾಗಿದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಅದರಂತೆ, ಪಂಚ-1 ರವರು ಲಂಚದ ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿದ್ದು, ಪಂಚ-2 ನೋಟಿನ ವಿವರವನ್ನು ಬಿಳಿ ಹಾಳೆಯಲ್ಲಿ ದಾಖಲಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿ ಸೂಚನೆಯ

ಮೇರೆಗೆ, ಪಂಚ-2 ಶ್ರೀ ಶಿವಾನಂದ ಬಸಪ್ಪ ಭರಮಶೆಟ್ಟಿ, ಇವರು ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಿಲೀನ್ ಪೌಡರ್ ಲೇಪಿಸಿದ 10,000/- ರೂ.ಗಳ ಹಣವನ್ನು ಎಣಿಸಿ, ದೂರುದಾರರು ಧರಿಸಿದಂತಹ ಶರ್ಟಿನ ಕಿಸೆಯಲ್ಲಿದ್ದ ಇಟ್ಟಿರುತ್ತಾರೆ. ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ಹೊರಗಡೆ ಬಂದು ತನ್ನ ಬಲಗೈ ಹೆಬ್ಬೆಟ್ಟು ಮೇಲಕ್ಕೆ ಎತ್ತುವ ಮೂಲಕ ಸೂಚನೆಯನ್ನು ನೀಡಬೇಕೆಂದು ಹಾಗೂ ಪಂಚ-1ರವರ ಜೊತೆ ಇದ್ದು, ಘಟನೆಯನ್ನು ಗಮನಿಸಬೇಕೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಒಂದು ವಾಯ್ಸ್ ರೆಕಾರ್ಡ್‌ನ್ನು ಕೊಟ್ಟು ಉಪಯೋಗಿಸುವ ವಿಧಾನವನ್ನು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಪಂಚರ ಸಮಕ್ಷಮ ಪ್ರಾಯೋಗಿಕ ಪಂಚನಾಮೆಯನ್ನು ದಿನಾಂಕ: 04/07/2020 ರಂದು 14.50 ಗಂಟೆಯಿಂದ ಸ: 15.50 ರವರೆಗೆ ಬರೆದಿರುತ್ತಾರೆ.

4. ದಿನಾಂಕ: 04/07/2020 ರಂದು ತನಿಖಾಧಿಕಾರಿಯು ದೂರುದಾರರನ್ನು, ಪಂಚರನ್ನು ಮತ್ತು ಸಿಬ್ಬಂದಿಯನ್ನು ಕರೆದುಕೊಂಡು, ಎದುರುದಾರರ ಕರ್ತವ್ಯ ನಿರ್ವಹಿಸುವ ಮಹಾಲಿಂಗಪೂರ ಸರ್ಕಾರಿ ಆಸ್ಪತ್ರೆಯ ಹತ್ತಿರ ಬಂದಿರುತ್ತಾರೆ. ನಂತರ ತನಿಖಾಧಿಕಾರಿಯು ದೂರುದಾರರಿಗೆ ಹಾಗೂ ಪಂಚ-1 ರವರಿಗೆ ಮತ್ತೊಮ್ಮೆ ಸೂಚನೆಯನ್ನು ಕೊಟ್ಟು ಎದುರುದಾರರನ್ನು ಭೇಟಿ ಮಾಡಲು ಕಳುಹಿಸಿಕೊಟ್ಟಿರುತ್ತಾರೆ. ನಂತರ ದೂರುದಾರರು ಸ್ವಾಗತಕಾರರ ಕೌಂಟರ್ ಪಕ್ಕ ಇದ್ದ, ಎದುರುದಾರರ ಕೋಣೆಗೆ ಹೋಗಿ ಅಲ್ಲಿ ಯಾರು ಇಲ್ಲದನ್ನು ಗಮನಿಸಿ, ಮರಳಿ ಹಿಂದಿನ ಬಾಗದಲ್ಲಿನ ವಾರ್ಡ್ ಬಳಿ ದೂರುದಾರರು ಮತ್ತು ಪಂಚ-1 ರವರನ್ನು ಕರೆದುಕೊಂಡು ಹೋಗಿದ್ದು, ಸುಮಾರು 17.30ರ ಸಮಯದಲ್ಲಿ ದೂರುದಾರರು ಶಸ್ತ್ರ ಚಿಕಿತ್ಸಾ ಕೊಠಡಿಯ ಒಳಗಡೆಯಿಂದ ಒಬ್ಬ ವ್ಯಕ್ತಿಯೊಂದಿಗೆ ನಡೆದುಕೊಂಡು ಬರುತ್ತಾ ನಿಗದಿತ ಸೂಚನೆಯನ್ನು ತನಿಖಾಧಿಕಾರಿಗೆ ನೀಡಿರುತ್ತಾರೆ. ಆಗ ಸಮಯ 17.40 ಗಂಟೆಯಾಗಿರುತ್ತದೆ. ಸೂಚನೆಯನ್ನು ಪಡೆದ ತನಿಖಾಧಿಕಾರಿ ದೂರುದಾರರಲ್ಲಿಗೆ ಬಂದು ಮಾಹಿತಿ ಪಡೆದು, ದೂರುದಾರರು ತೋರಿಸಿದ ಮೇರೆಗೆ, ಸದರಿ ವ್ಯಕ್ತಿ ಯನ್ನು ಹಿಡಿಯಲು ಹೋದಾಗ, ಅವರು ತಪ್ಪಿಸಿಕೊಂಡು ಆಸ್ಪತ್ರೆಯ ಹಿಂದಿನ ಆವರಣದಲ್ಲಿರುವ ವಸತಿ ಗೃಹದ ಹತ್ತಿರ ಓಡಿ ಹೋಗಿರುತ್ತಾರೆ. ಸದರಿ ವ್ಯಕ್ತಿಯನ್ನು ತನಿಖಾಧಿಕಾರಿ ಸಿಬ್ಬಂದಿ ಬೆನ್ನಟ್ಟಿ ಹಿಡಿದು, ಸದರಿ ವ್ಯಕ್ತಿಯು ಎದುರುದಾರರಾಗಿದ್ದು, ತನಿಖಾಧಿಕಾರಿಯು ಅವರಿಗೆ ತನ್ನನ್ನು ಪರಿಚಯಿಸಿಕೊಂಡು, ವಿಚಾರಣೆ ಮಾಡಿ, ಎದುರುದಾರರ ವಿರುದ್ಧ ಪ್ರಕರಣ ದಾಖಲಾಗಿರುವುದರ ಬಗ್ಗೆ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಯವರ ಸೂಚನೆಯ ಮೇರೆಗೆ, ಸಿಬ್ಬಂದಿಯು ಎದುರುದಾರರ ಎರಡೂ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ ನಂತರ ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಎದುರುದಾರರು ದೂರುದಾರರಿಂದ ಪಡೆದ ಲಂಚದ ಹಣವನ್ನು ತನ್ನ ಪ್ಯಾಂಟಿನ ಎಡ ಕಿಸೆಯಲ್ಲಿ ಇಟ್ಟಿರುವುದಾಗಿ ತಿಳಿಸಿದ ಮೇರೆಗೆ, ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಪಂಚ-1 ರವರು ಎದುರುದಾರರ ಪ್ಯಾಂಟಿನ ಎಡ ಕಿಸೆಯಲ್ಲಿ ಹಣವನ್ನು ತೆಗೆದು ಹಾಜರುಪಡಿಸಿದ್ದು, ಅವುಗಳನ್ನು ಪರಿಶೀಲಿಸಿ, ಪ್ರಾಯೋಗಿಕ ಪಂಚನಾಮೆ ವೇಳೆಯಲ್ಲಿ ಬರೆದ ಪಟ್ಟಿಗೆ ತಾಳೆ ಮಾಡಿ, ಖಾತ್ರಿ ಪಡಿಸಿಕೊಂಡು ನಂತರ ತನಿಖಾಧಿಕಾರಿಯವರು ಸದರಿ ಲಂಚದ ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯವರು ಲಂಚದ ಹಣ ಪಡೆದ ಬಗ್ಗೆ ಎದುರುದಾರರಿಂದ ಸಮಜಾಯಿಷಿಯನ್ನು

ಕೇಳಲಾಗಿ, ಎದುರುದಾರರು ತನ್ನ ಸಮಜಾಯಿಷಿಯನ್ನು **"With Reference to the above subject I undersigned Dr. Gurunath B Kagalagomb as patient Smt. Bagyashree S. Hanumgouder admitted on 29.06.2020 & done caesarian section on 30.06.2020 which is uneventful, I have not taken any money from anyone they only instated & trown the money to spoil my name & my profession. It is purely professional jealousy to transfer from mahalingpur & patient is still in the ward & healthy. As I am suffering from ischemic heart disease & my daughter taking NEET exam shortly, so please help me. As I belonging to S.C. (Hindu-Madar) so please help me, if you do I will be ever grateful to you sir.**

**Thanking,**

**Mahalingpur**

**4/7/2020**

**Yours faithfully**

**Sd/-**

**(Dr.G.B.Kagalgomb)**

ತನಿಖಾಧಿಕಾರಿಯು ಎದುರುದಾರರ ಬರೆದುಕೊಟ್ಟ ಹೇಳಿಕೆಯನ್ನು ಕನ್ನಡಕ್ಕೆ ಅನುವಾದ ಮಾಡಿ, ಎಲ್ಲರಿಗೂ ಅರ್ಥವಾಗುವಂತೆ ತಿಳಿಸಿರುತ್ತಾರೆ. ಸದರಿ ಎದುರುದಾರರ ಹೇಳಿಕೆಯನ್ನು ದೂರುದಾರರು ಅಲ್ಲಗಳೆದಿರುತ್ತಾರೆ. ನಂತರ, ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಅಂದೇ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ ಟ್ರ್ಯಾಪ್ ಪಂಚನಾಮೆಯನ್ನು ದಿ: 04/07/2020 ರಂದು ಸಮಯ: 17.45 ರಿಂದ 20.30 ರವರೆಗೆ ಪಂಚರ ಸಮಕ್ಷಮ ಬರೆದಿರುತ್ತಾರೆ.

5. ಆಪಾದಿತರ ಮೇಲಾಧಿಕಾರಿ ಶ್ರೀ ವೆಂಕಟೇಶ ಲಕ್ಷ್ಮಣ ಮಲಘಾಣ, ತಾಲ್ಲೂಕು ಆರೋಗ್ಯಾಧಿಕಾರಿ, ಮುಧೋಳ, ಇವರಿಗೆ ಲಂಚದ ಬೇಡಿಕೆ/ಕೊಡುವ ಸಮಯದ ಸಂಭಾಷಣೆಗಳನ್ನು ಕೇಳಿಸಿದಾಗ, ಅವರು ಮೂಡಿ ಬಂದ ಧ್ವನಿಗಳ ಪೈಕಿ ಒಂದು ಧ್ವನಿ ಎದುರುದಾರರದ್ದೆಂದು ಗುರುತಿಸಿರುತ್ತಾರೆ.

6. ತನಿಖಾಧಿಕಾರಿಯವರು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಧ್ವನಿಗೆ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಇರುವ ಸಂಬಂಧವಾಗಿ ವರದಿಯನ್ನು ಕೋರಿ, ವಿಧಿ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ಇವರಿಗೆ ಸಲ್ಲಿಸಿರುತ್ತಾರೆ.

7. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಫ್ತಲೀನ್ ಅಂಶ ಇರುವುದು ದೃಢಪಟ್ಟಿದೆ.

8. ದಿನಾಂಕ: 30/04/2022 ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ/ವಿವರಣೆಯನ್ನು ಕೇಳಲಾಗಿತ್ತು. ಸದರಿ ಪರಿವೀಕ್ಷಣಾ ಟಿಪ್ಪಣಿಯು ಎದುರುದಾರರಿಗೆ ದಿ: 30/05/2022 ರಂದು ಜಾರಿಯಾಗಿರುತ್ತದೆ. ಎದುರುದಾರರು ದಿ: 06/06/2022 ರಂದು ಪರಿವೀಕ್ಷಣಾ ಟಿಪ್ಪಣಿಗೆ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ ಎದುರುದಾರರು ತಾನು ದಿ: 29-06-2020 ರಂದು ದೂರುದಾರರ ಅಕ್ಕ ಭಾಗ್ಯಶ್ರೀ ಇವರನ್ನು ದೂರುದಾರರ ಮತ್ತು ಆತನ ಇನ್ನೊಬ್ಬ ಸಹೋದರಿ ಶ್ರೀಮತಿ ರಾಜಶ್ರೀ ಎಂಬುವರು ಮಹಾಲಿಂಗಪುರ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಬಂದು ದಾಖಲಿಸಿರುತ್ತಾರೆ. ಸದರಿ ಭಾಗ್ಯಶ್ರೀ ರವರನ್ನು ತಾನು ಪರೀಕ್ಷಿಸಿದ ನಂತರ ಆಸ್ಪತ್ರೆಯಲ್ಲಿ ದಾಖಲು ಮಾಡಿಕೊಂಡು ಮರು ದಿನ ಅಂದರೆ ದಿ: 30-062020 ರಂದು ಮಧ್ಯಾಹ್ನ 12.00 ಗಂಟೆ ಸುಮಾರಿಗೆ ಭಾಗ್ಯಶ್ರೀ ಯವರಿಗೆ ಶಸ್ತ್ರ ಚಿಕಿತ್ಸೆ ಮೂಲಕ ಹೆರಿಗೆ ಮಾಡಿದ್ದು, ಆರೋಗ್ಯವಂತ ಗಂಡು ಮಗು ಜನಸಿದ್ದು ಇರುತ್ತದೆ ಎಂಬುದನ್ನು ಒಪ್ಪಿಕೊಂಡಿರುತ್ತಾರೆ. ಉಳಿದ ಪರಿವೀಕ್ಷಣಾ ಟಿಪ್ಪಣಿಯ ಅಂಶಗಳನ್ನು ಸಾರಾಸಗಟವಾಗಿ ಅಲ್ಲಗಳೆದಿರುತ್ತಾರೆ. ಮುಂದುವರೆದು ತಾನು ಕರ್ತವ್ಯದಲ್ಲಿ ಲೋಪವೆಸಗಿಲ್ಲವೆಂದು ಹಾಗೂ ತನ್ನನ್ನು ಇಲಾಖಾ ವಿಚಾರಣೆಯಿಂದ ಕೈ ಬಿಡುವಂತೆ ಪ್ರಾರ್ಥಿಸಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಕೆಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ ಹಾಗೂ ಅವರು ಯಾವುದೇ ಪೂರಕ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಹಾಗಾಗಿ ಇವರ ವಿರುದ್ಧ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡದೇ ಇರಲು ಸೂಕ್ತ ಕಾರಣಗಳು ಕಂಡುಬಂದಿರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಮೇಲ್ನೋಟಕ್ಕೆ ದುರ್ನಡತೆ ಕಂಡು ಬರುತ್ತದೆ.

9. ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೆ, ಕರ್ತವ್ಯ ಶ್ರದ್ಧೆಯನ್ನು ಹೊಂದಿರದೆ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸುತ್ತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021) ನಿಯಮ 3(1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದ್ದುದರಿಂದ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಾಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು